ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ

೯೪೪ (೩೦೩೩) ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಭದ್ರಾ ಮೇಲ್ದಂಡೆ ಯೋಜನೆಯನ್ನು ಜಾರಿಗೆ ತಂದಲ್ಲಿ ಎಷ್ಟು ಎಕರೆ ಜಮೀನು ನೀರಾವರಿಯಾಗುತ್ತದೆ. ಎಷ್ಟು ಎಕರೆ ಜಮೀನು ಮುಳುಗಡೆಯಾಗುತ್ತದೆ. ಯಾವ ಯಾವ ಜಿಲ್ಲೆಗಳಿಗೆ ಅನುಕೂಲ ಆಥವಾ ಅನಾನುಕೂಲವಾಗುತ್ತದೆ? (ವಿವರ ನೀಡುವುದು)

ಆ) ಈ ಯೋಜನೆಯನ್ನು ಕಾರ್ಯಗತ ಮಾಡುವ ಬಗ್ಗೆ ಚಿತ್ರದುರ್ಗ ಮತ್ತು ಚಿಕ್ಕಮಗಳೂರು ರೈತರ ಮಧ್ಯೆ ಭಿನ್ನಾಭಿಪ್ರಾಯಗಳು ಉದ್ಭವಿಸಿರುವುದು ನಿಜವೆ ?

ಇ) ಹಾಗಿದ್ದಲ್ಲಿ ಭಿನ್ನಾಭಿಪ್ರಾಯಗಳ ಮುಖ್ಯ ಅಂಶಗಳೇನು ?

ಈ) ಇದನ್ನು ಬಗೆಹರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಪೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ)
ಇಂದ
ಈ) } ಯೋಜನೆಯು ಇನ್ನೂ ಅನ್ವೇಷಣೆಯಲ್ಲಿದೆ.
ಯೋಜನಾ ವಿವರಗಳು ಖಚಿತವಾಗಿಲ್ಲ.

ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರ ಕೊಟ್ಟಿರುವುದನ್ನು ಮುಂದುವರಿಸುತ್ತ, ಈ ಸದನದ ಮುಂದೆ ಈ ಬಗ್ಗೆ ಮುಚ್ಚಿಡುವಂಥಾದ್ದು ಏನೂ ಇಲ್ಲ ವೆಂದು ಅಪ್ಪರ್ ಭದ್ರಾ ಯೋಜನೆಯ ವಿವರಗಳನ್ನು ಕೊಡುತ್ತೇನೆ. ೧೧೯೦ ಕೋಟಿ ರೂ.ಗೆ ಅಪ್ಪರ್ ಭದ್ರಾಕ್ಕೆ ಒಂದು ಅಂದಾಜು ತಯಾರಾಗಿದೆ. ಆದರಲ್ಲಿ ೫.೩೭,೦೦೦ ಎಕರೆ ನೀರಾವರಿ ಆಗಬಹುದೆಂದು ಇದೆ. ಇದರ ಪೈಕಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ೯೩,೨೩೦ ಎಕರೆ, ಚಿತ್ರದುರ್ಗ ಜಿಲ್ಲೆಯಲ್ಲಿ ೩,೬೮,೧೫೦ ಎಕರೆ, ತುಮಕೂರು ಜಿಲ್ಲೆಯ ೪೨,೬೩೬ ಎಕರೆ, ಹಾಸನದ ೩೨,೨೦೦ ಎಕರೆ ಆಮೇಲೆ ಮುಳುಗಡೆ ಯಾಗುವ ಜಮೀನೆಂದರೆ ೧೪,೨೨೮ ಎಕರೆಗಳು. ಇದರಲ್ಲಿ ೪,೭೮೮ ಎಕರೆ ಫಾರೆಸ್ಟ್ ಲ್ಯಾಂಡ್, ೨೫೧೩ ಎಕರೆ ಕಾಫಿ ಲ್ಯಾಂಡ್, ೪೫೪ ಎಕರೆ ಗಾರ್ಡನ್ ಲ್ಯಾಂಡ್, ೨,೦೯೫ ಎಕರೆ ವೆಟ್ ಲ್ಯಾಂಡ್, ೪೧೯ ಎಕರೆ ಡ್ರೈಲ್ಯಾಂಡ್, ೮೧೯ ಎಕರೆ ಖರೀಫ್, ಮತ್ತು ೩೨೦೦ ಎಕರೆ ರಿವರ್ ಬೇಸಿನ್—ಹೀಗೆ ಟೋಟಲ್ ೧೬೨೨೮ ಎಕರೆ ಮುಳುಗಡೆಯಾಗುತ್ತದೆ. ಈ ಮಧ್ಯೆ ಮತ್ತೊಂದು ಸಮಸ್ಯೆ ಉದ್ಭವವಾಗಿದೆ, ಕುದುರೆಮುಖ ಯೋಜನೆಯು ಬಹುಭಾಗ ಮುಳುಗಡೆ ಯಾಗುತ್ತದೆಂದು ಬರೆಯಲಾಗಿದೆ. ಆ ರೀತಿ ಆಗದೇ ಇರಬೇಕಾದರೆ ಯೋಜನೆಯ ನೀರಿನ ಲೆವೆಲ್ ರೆಡ್ಯೂಸ್ ಮಾಡಬೇಕೆ ಹೊರತು ಮುಳುಗಡೆ ಆಗುವುದನ್ನು ತಪ್ಪಿಸಲು ಆಗುವುದಿಲ್ಲ. ಇದಕ್ಕೆ ಸಂಬಂಧಪಟ್ಟ ಹಾಗೆ ನಾನು ಈಗಾಗಲೇ ಪತ್ರ ಬರೆದಿದ್ದೇನೆ. The General Manager of M/s. Kudremukh Iron-Ore Company Ltd. *vide* his letter dated 27-6 1988- addressed to Government has stated that with the implimentation of Upper Bhadra Project as envisaged now, the outer toe of the Lakya Dam will be under water, which affects the future planning of raising the level of Lakya Dam, maintainance of Slurry pipe line becomes difficult, due to disruption of water supply, electrical transmission and sewage system, the entire Sector-V of township has to be abandoned. New approach road to Mines, Ware-House and Sector VI to be planned, so also alternate road link from Kudremukh to Kalasa has to be planned besides re-routing of electrical lines and re-location of many units. The company has requested that the level of Upper Bhadra dam may be reduced suitably so that their project is not affected. The points raised by M/s. Kudremukh Iron Ore

Company Limited have also been referred to the Chief Engineer, Water Resources Development Organisation, Bangalore for examination and report.

ಶ್ರೀ ಎಂ.ಎಸ್. ಕೃಷ್ಣನ್.—ಅಧ್ಯಕ್ಷರೇ, ಒಂದು ಸಂತೋಷ ಏನೆಂದರೆ ಖಚಿತವಾಗಿ ಅಲ್ಲ ದಿದ್ದರೂ ಅನೇಕ ವಿವರಗಳನ್ನು ಕೊಟ್ಟಿದ್ದಾರೆ. ನಾನು ತಪ್ಪುಗಳನ್ನು ಕೇಳಿಕೊಳ್ಳುವುದೇನೆಂದರೆ ಒಂದು ಕಡೆ ಸುಮಾರು ೫ ಲಕ್ಷ ಚಿಲ್ಲರೆ ಎಕರೆ ನೀರಾವರಿಯಾಗುವಂಥಾ ಪರಿಸ್ಥಿತಿ ಇನ್ನೊಂದು ಕಡೆ ಕಾದುರೆಮುಖಿ ಸೇರಿಸಿಕೊಂಡು ೧೪,೨೨೮ ಎಕರೆ ಮುಳುಗಡೆಯಾಗುವಂಥಾ ಪರಿಸ್ಥಿತಿ. ಈ ಎರಡನ್ನೂ ಸಮತೋಲನ ಮಾಡಿ ಮುಳುಗಡೆಯಾಗದ ಹಾಗೆ ಕಾದುರೆಮುಖಿ ಯೋಜನೆಯನ್ನು ಗಮನದಲ್ಲಿಟ್ಟುಕೊಂಡು ಯಾವುದು ಸರಿ ಯಾವುದು ಸರಿ ಅಲ್ಲ ಎಂದು ತೀರ್ಮಾನ ಮಾಡಿ. ಇದಕ್ಕೆ ಮೊದಲು ಸಂಬಂಧಪಟ್ಟ ಅಂದರೆ ಚಿಕ್ಕಮಗಳೂರು ಜಿಲ್ಲಾ ಜನತೆಯ ಪ್ರತಿನಿಧಿಗಳು, ಚಿತ್ರದುರ್ಗ ಜಿಲ್ಲೆ ಜನತೆ ಪ್ರತಿನಿಧಿಗಳು ಇವರನ್ನೆಲ್ಲ ಕರೆದು ಮಾತನಾಡಿ ಸರಿಯಾದ ತೀರ್ಮಾನ ತೆಗೆದುಕೊಳ್ಳುತ್ತೀರೆಂದು ನಂಬಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಕೃಷ್ಣನ್‌ರವರು ಹೇಳಿದಂತಹ ವಿಷಯವನ್ನು ಗಮನದಲ್ಲಿಟ್ಟುಕೊಂಡು ತಜ್ಞರ ಜೊತೆ ಸಮಾಲೋಚನೆ ಮಾಡಿ ಇದರ ಬಗ್ಗೆ ಅಂತಿಮ ನಿರ್ಣಯವನ್ನು ಮಾಡುತ್ತೇವೆ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ತಮ್ಮ ಪ್ರಶ್ನೆಗೆ ಕಾಲಾವಕಾಶ ಬೇಕು ಎಂದು ತಿಳಿಸಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಬಹಳ ಸಿಂಪಲ್ ಪ್ರಶ್ನೆಯನ್ನು ಕೇಳಿದ್ದೇನೆ. ಆದ್ದರಿಂದ ಇದಕ್ಕೆ ಈ ಅಧಿವೇಶನದಲ್ಲೇ ಉತ್ತರವನ್ನು ತರಿಸಿಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು.—ಉತ್ತರ ತರಿಸಿಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ನೀರಾವರಿ ಯೋಜನೆಗಳ ಬಗ್ಗೆ

೯೩೧ (೩೦೦) ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ೧೯೮೫ ರಿಂದ ಆಗಸ್ಟ್ ೧೯೮೮ರವರೆಗೆ ನೀರಾವರಿಗಾಗಿ ರಾಜ್ಯದಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ (ವರ್ಷವಾರು ವಿವರಣೆ ನೀಡುವುದು) ?

ಆ) ಇದು ನಿರೀಕ್ಷಿತ ಮಟ್ಟವನ್ನು ಮುಟ್ಟಿದಿರುವುದರಿಂದ ರಾಜ್ಯದಲ್ಲಿ ಈಗಾಗಲೇ ಪ್ರಗತಿಯಲ್ಲಿ ಇರುವ ಯೋಜನೆಗಳ ಕೆಲಸವು ಕುಂಠಿತವಾಗಿ ಹಾಗೂ ವೆಚ್ಚ ಹೆಚ್ಚಾಗುವುದಿಲ್ಲವೇ ?

ಇ) ಯೋಜನೆಗಳು ಪೂರ್ಣವಾಗುವವರೆಗೆ ಹೊಸ ಯೋಜನೆಗೆ ಕೇಂದ್ರ ಅನುಮತಿ ನೀಡುವು ದಿಲ್ಲವೆಂಬ ಅಂಶದಿಂದ ಕೃಷ್ಣ ನದಿಯ ಬಚಾವತ್ ಪರದಿ ಅನುಷ್ಠಾನವಾಗದಿದ್ದರೆ ರಾಜ್ಯಕ್ಕೆ ಅನ್ಯಾಯವಾಗುವುದಿಲ್ಲವೆ ?

ಈ) ಹಾಗಾಗದಿದ್ದಲ್ಲಿ ಈ ಕೃಷ್ಣ ನದಿಯ ನೀರಿನ ಪಾಲನ್ನು ಬಳಕೆ ಮಾಡಿಕೊಳ್ಳಲು ರಾಜ್ಯ ಸರ್ಕಾರ ಯೋಜಿಸಿರುವ ಯೋಜನೆಗಳು ಯಾವುವು ಅದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು ?